**ಓ.ಎಸ್. ನಂ. 8/2018** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 7.2.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎನ್.ಆರ್ ವಕೀಲರಿಂದಃ

ನಾನು ಮೈಸೂರಿನ ರಾಜರಾಜೇಶ್ವರಿ ಲೇಔಟ್, ಬಿ.ಇ.ಎಂ.ಎಲ್, ಡೋರ್ ನಂ.1169 ರಲ್ಲಿ ವಾಸವಾಗಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಾನು ವ್ಯವಹಾರ ಮಾಡುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿದಾರರು ವ್ಯವಹಾರ ಮತ್ತು ವ್ಯವಸಾಯ ಎರಡನ್ನೂ ಮಾಡುತ್ತೇನೆ ಎನ್ನುವರು. ನಾನು ಅಕ್ಕಿ ವ್ಯಾಪಾರ ಮಾಡುತ್ತೇನೆ. ನಾನು ಅಕ್ಕಿ ವ್ಯಾಪಾರ ಮಾಡುತ್ತಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ವ್ಯವಸಾಯ ಮಾಡುವ ಜಮೀನಿನ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಿಂಗಳ ಆದಾಯವನ್ನು ತೋರಿಸುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯು ಅವರ ಬಾಮೈದನಾದ ಗಿರೀಶ್ ರವರ ಮೂಲಕ 2012 ರಲ್ಲಿ ಪರಿಚಯವಾಗಿರುತ್ತಾರೆ. ದಾವಆಸ್ತಿಗಳು 1 ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ದಾವಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ಅವರ ಮಕ್ಕಳಿಗೂ ಸಮನಾದ ಪಾಲು ಇರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಈ ಕೇಸು ದಾಖಲಿಸುವಾಗ ಅವರು ಅಪ್ರಾಪ್ತ ವಯಸ್ಕರಾಗಿದ್ದರು ಎನ್ನುವರು. ದಾವಆಸ್ತಿಗಳು ದಿನಾಂಕ 2.12.2010 ರಂದು ನೋಂದಾಯಿತ ವಿಭಾಗ ಪತ್ರದ ಮೂಲಕ 1 ನೇ ಪ್ರತಿವಾದಿಗೆ ಬಂದಿರುವ ಆಸ್ತಿಗಳು ಎಂದರೆ ಸರಿ. ನಿಪಿ1 ದಾಖಲೆಯನ್ನು ಹೆಚ್.ಡಿ.ಕೋಟೆಯ ತಾಲ್ಲೂಕು ಕಛೇರಿ ಮುಂಭಾಗದಲ್ಲಿ ತಯಾರಿಸಲಾಗಿರುತ್ತದೆ. ಸದರಿ ದಾಖಲೆಯನ್ನು ಮೈಸೂರಿನ ಪತ್ರಬರಹಗಾರರಾದ ಎನ್.ಎಸ್.ಮಲ್ಲೇಗೌಡ ರವರು ತಯಾರಿಸಿರುತ್ತಾರೆ. ಸದರಿ ದಾಖಲೆಗೆ ಸ್ಟಾಂಪ್ ಪೇಪರನ್ನು 1 ನೇ ಪ್ರತಿವಾದಿ ತಂದಿದ್ದರು. ಸ್ಟಾಂಪ್ ಪೇಪರ್ 200/- ರೂ. ಮೌಲ್ಯದ್ದಾಗಿರುತ್ತದೆ. ಕರಾರುಪತ್ರದ ಒಟ್ಟು ಮೌಲ್ಯ 10 ಲಕ್ಷ ಆಗಿರುತ್ತದೆ. 10 ಲಕ್ಷ ಮೌಲ್ಯಕ್ಕೆ ಕೇವಲ 200/- ರೂ. ಸ್ಟಾಂಪ್ ಪೇಪರ್ ಮೇಲೆ ದಾಖಲೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿಪಿ1 ನ್ನು ಏಕೆ ನೋಂದಣಿ ಮಾಡಿಸಲಿಲ್ಲ ಎಂದರೆ ಸಾಕ್ಷಿದಾರರು ಪ್ರತಿವಾದಿಯರು ಬೇಡ ಎಂದು ಹೇಳಿರುತ್ತಾರೆ ಎನ್ನುವರು. ನನಗೆ ನೋಂದಣಿ ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ. ನನಗೆ ದಾವಆಸ್ತಿಗಳನ್ನು ಕ್ರಯಕ್ಕೆ ಪಡೆದುಕೊಳ್ಳುವ ಉದ್ದೇಶವಿರಲಿಲ್ಲ, ಆ ಕಾರಣ ನಿಪಿ1 ನ್ನು ನೋಂದಣಿ ಮಾಡಿಸಲಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯರು ಹಣಕಾಸು ವ್ಯವಹಾರ ಇದ್ದುದರಿಂದ ನಿಪಿ1 ನ್ನು ನೋಂದಣಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ಮುಂಗಡವಾಗಿ 9 ಲಕ್ಷವನ್ನು ನೀಡಿರುತ್ತೇನೆ. 9 ಲಕ್ಷ ಹಣ ನನ್ನ ಬಳಿ ಇದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಆದಾಯದ ಮೂಲವನ್ನು

ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ನನ್ನ ಮಕ್ಕಳು ವಿದೇಶದಲ್ಲಿ ಉದ್ಯೋಗದಲ್ಲಿರುತ್ತಾರೆ ಎನ್ನುವರು. 9 ಲಕ್ಷ ಹಣವನ್ನು ಚೆಕ್ ಮೂಲಕ ನೀಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಪ್ರತಿವಾದಿಯರು ನಗದಾಗಿ ನೀಡಲು ಹೇಳಿರುತ್ತಾರೆ ಎನ್ನುವರು. ನಾನು ಪ್ರತಿವಾದಿಯರಿಗೆ 500/- ಹಾಗೂ 1000/- ರೂ. ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ. ಸದರಿ ಸಮಯದಲ್ಲಿ ಅಂದಾಜು 7-8 ಜನ ಇದ್ದರು. ಅವರ ಹೆಸರು ಸೋಮಶೇಖರ್, ಸಂತೋಷಕುಮಾರ್ ಆಗಿದ್ದು, ಉಳಿದವರು ಪ್ರತಿವಾದಿಯವರ ಕಡೆಯವಾಗಿರುತ್ತಾರೆ. ದಾವೆಆಸ್ತಿಗಳು ಕೃಷಿ ಭೂಮಿಗಳು ಎಂದರೆ ಸರಿ. ದಾವೆಆಸ್ತಿಗಳು ಒಟ್ಟು 4 ಸರ್ವೆ ನಂಬರಿನಲ್ಲಿರುತ್ತವೆ. 4 ಆಸ್ತಿಗಳ ಮೌಲ್ಯವನ್ನು ಪ್ರತ್ಯೇಕವಾಗಿ ನಿಪಿ1 ರಲ್ಲಿ ನಮೂದಿಸಿರುವುದಿಲ್ಲ, ಒಟ್ಟು ಮೌಲ್ಯವನ್ನು ನಮೂದಿಸಲಾಗಿರುತ್ತದೆ. ದಾವೆಆಸ್ತಿಗಳ ಮೌಲ್ಯವನ್ನು ತೋರಿಸುವ ಬಗ್ಗೆ ನೋಂದಣಿ ಕಛೇರಿಯಿಂದ ಪಡೆದುಕೊಂಡಿರುವ ಮೌಲ್ಯ ನಿರ್ಧರಣಾ ಪಟ್ಟಿಯನ್ನು ಹಾಜರುಪಡಿಸಿರುವುದಿಲ್ಲ. ದಾವೆಆಸ್ತಿಗಳ ಮೇಲೆ ನಿಪಿ1 ಆಗುವ ಪೂರ್ವದಲ್ಲಿ ಬ್ಯಾಂಕಿನಲ್ಲಿ ಸಾಲ ಇತ್ತು ಎಂದರೆ ಸರಿ. ಸದರಿ ವಿಚಾರವನ್ನು ನಿಪಿ1 ರಲ್ಲಿ ನಮೂದು ಮಾಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.